ವಿದೇಶಗಳಿಗೆ ಅಧ್ಯಯನ ಪ್ರವಾಸ

1919(3121); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತರನ್ನು ವಿದೇಶಗಳಿಗೆ ಅಧ್ಯಯನ ಪ್ರವಾಸಕ್ಕಾಗಿ ಕಳುಹಿಸಲಾಗಿದೆ; (ವಿಧಾನ ಸಭಾ ಕ್ಷೇತ್ರವಾರು ವಿವರ ನೀಡುವುದು);

ಆ) ಯಾವ ಯಾವ ದೇಶಗಳೀಗೆ ರೈತರು ಅಧ್ಯಯನ ಪ್ರವಾಸ ಕೈಗೊಂಡಿದ್ದರು ಇದ್ದಕ್ಕಾಗಿ ಮೇಲ್ಕಂಡ ಅವಧಿಯಲ್ಲಿ ಖರ್ಚಾದ ಹಣವೆಷ್ಟು;

ಇ) ಈ ಅಧ್ಯಯನ ಪ್ರವಾಸಕ್ಕೆ ಸಂಬಂಧಪಟ್ಟಂತೆ ವರದಿ ತಯಾರಿಸಲಾಗಿದೆಯೇ; (ವಿವರ ನೀಡುವುದು)?

ಶ್ರೀ ಕೃಷ್ಣ ಬೈರೇಗೌಡ (ಮಾನ್ಯ ಕೃಷಿ ಸಚಿವರು)

ಅ) ರಾಜ್ಯದಲ್ಲಿ ಕಳೆದ ಮೂರು ವರ್ಷಗಳಲ್ಲಿ 375 ರೈತರನ್ನು ವಿದೇಶಗಳಿಗೆ ಅಧ್ಯಯನ ಪ್ರವಾಸಕ್ಕಾಗಿ ಕಳುಹಿಸಲಾಗಿದೆ. (ವಿಧಾನಸಭಾ ಕ್ಷೇತ್ರವಾರು ವಿವರಗಳನ್ನು ಅನುಬಂಧ–1ರಲ್ಲಿ ನೀಡಿದೆ)

ಆ) ಚೀನಾ ಮತ್ತು ಇಸ್ರೇಲ್ ದೇಶಗಳಿಗೆ ರೈತರು ಅಧ್ಯಯನ ಪ್ರವಾಸ ಕೈಗೊಂಡಿದ್ದರು. ಇದಕ್ಕಾಗಿ ಮೇಲ್ಕಂಡ ಅವಧಿಯಲ್ಲಿ ₹ 234.09 ಲಕ್ಷ ಗಳು ವೆಚ್ಚವಾಗಿರುತ್ತದೆ.

ಇ) ಈ ಅಧ್ಯಯನ ಪ್ರವಾಸಕ್ಕೆ ಸಂಬಂಧಪಟ್ಟಂತೆ ವರದಿಯನ್ನು ಅನುಬಂಧ–2 ರಲ್ಲಿ ನೀಡಿದೆ.

ಅನುಬಂಧ–1

ಅಧ್ಯಯನ ಪ್ರವಾಸ ಕೈಗೊಂಡಿರುವ ವಿಧಾನ ಸಭಾ ಕ್ಷೇತ್ರವಾರು ರೈತರ ಸಂಖ್ಯೆಯ ವಿವರ

ಕ್ರ.ಸಂ.	ವಿಧಾನ ಸಭಾ ಕ್ಷೇತ್ರ	2011–12	2012–13		ಒಟ್ಟು
		ಚೀನಾ	ಚೀನಾ	ಇಸ್ರೇಲ್	
1	ಚಿಕ್ಕೋಡಿ–ಸದಲಗ	–	4	1	5
2	ಅಥಣಿ	5	4	–	9
3	ರಾಯಭಾಗ	2	8	–	10
4	ಹುಕ್ಕೇರಿ	–	8	2	10
5	ಗೋಕಾಕ್	–	–	1	1
6	ಬೆಳಗಂ ಉತ್ತರ	2	2	–	4
7	ಖಾನಾಪುರ	2	–	–	2
8	ಬೈಲಹೊಂಗಲ	6	–	3	9
9	ಸವದತ್ತಿ ಯಲ್ಲಮ್ಮ	3	–	1	4
10	ರಾಮದುರ್ಗ	2	1	–	3
11	ಮುಧೋಳ	1	–	–	1
12	ಜಮಖಂಡಿ	4	6	–	10
13	ಬೀಳಗಿ	1	–	1	2
14	ಬಾದಾಮಿ	–	1	–	1
15	ಬಾಗಲಕೋಟೆ	3	–	–	3

16	ಹುನಗುಂದ	1	1	–	2
17	ಮುದ್ದೇಬಿಹಾಳ	3	0	0	3
18	ಬಸವನಬಾಗೇವಾಡಿ	–	–	1	1
19	ಜೇವರ್ಗಿ	2	–	–	2
20	ಯಾದಗಿರಿ	2	–	2	4
21	ಚಿತ್ತಾಪುರ	2	–	–	2
22	ಸೇಡಂ	1	–	–	1
23	ಗುಲ್ಬರ್ಗಾ ಗ್ರಾಮಾಂತರ	2	–	–	2
24	ಗುಲ್ಬರ್ಗಾ ದಕ್ಷಿಣ	1	–	–	1
25	ಗುಲ್ಬರ್ಗಾ ಉತ್ತರ	–	–	1	1
26	ಆಳಂದ	2	–	1	3
27	ಬಸವಕಲ್ಯಾಣ	1	–	–	1
28	ಹುಮ್ನಾಬಾದ್	1	–	–	1
29	ಬಾಲ್ಕಿ	2	–	–	2
30	ಮಾನ್ವಿ	–	1	–	1
31	ಲಿಂಗಸೂಗೂರು	1	1	–	2
32	ಗಂಗಾವತಿ	1	1	–	2
33	ಯಲಬುರ್ಗಾ	1	2	1	4
34	ಕೊಪ್ಪಳ	1	2	1	4
35	ಶಿರಹಟ್ಟಿ	2	1	3	6
36	ಗದಗ	1	1	1	3

37	ರೋಣ	2	–	1	3
38	ನರಗುಂದ	–	–	1	1
39	ನವಲಗುಂದ	2	–	1	3
40	ಕುಂದಗೋಳ	1	–	–	1
41	ಧಾರವಾಡ	2	–	1	3
42	ಹುಬ್ಬಳ್ಳಿ ಧಾರವಾಡ ಪೂರ್ವ	2	–	–	2
43	ಹುಬ್ಬಳ್ಳಿ ಧಾರವಡ ಕೇಂದ್ರ	6	2	–	8
44	ಹುಬ್ಬಳ್ಳಿ ಧಾರವಾಡ ಪಶ್ಚಿಮ	1	–	–	1
45	ಹಳಿಯಾಳ	1	–	–	1
46	ಯಲ್ಲಾಪುರ	3	–	–	3
47	ಹಾನಗಲ್	–	–	1	1
48	ಶಿಗ್ಗಾಂವ್	–	–	2	2
49	ಬ್ಯಾಡಗಿ	1	–	–	1
50	ಹಿರೇಕೆರೂರು	5	–	–	5
51	ರಾಣೇಬೆನ್ನೂರು	3	–	2	5
52	ಸಂಡೂರು	2	–	–	2
53	ಕುಡ್ಲಗಿ	1	–	–	1
54	ಮೊಳಕಾಲ್ಮೂರು	4	–	–	4
55	ಚಳ್ಳಕೆರೆ	2	1	–	3
56	ಚಿತ್ರದುರ್ಗ	6	2	1	9

57	ಹಿರಿಯೂರು	2	–	–	2
58	ಹೊಳಲ್ಕೆರೆ	–	1	–	1
59	ಜಗಳೂರು	–	1	–	1
60	ಹರಪ್ಪನಹಳ್ಳಿ	2	2	2	6
61	ಹರಿಹರ	3	1	2	6
62	ದಾವಣಗೆರೆ ಉತ್ತರ	3	–	–	3
63	ದಾವಣಗೆರೆ ದಕ್ಷಿಣ	2	–	1	3
64	ಚನ್ನಗಿರಿ	8	1	–	9
65	ಹೊನ್ನಾಳಿ	–	2	2	4
66	ಶಿವಮೊಗ್ಗ ಗ್ರಾಮಾಂತರ	1	–	–	1
67	ಭದ್ರಾವತಿ	–	–	4	4
68	ಶಿವಮೊಗ್ಗ	1	–	–	1
69	ಸೊರಬ	3	–	1	4
70	ಉಡುಪಿ	–	2	–	2
71	ಕಾಪು	2	–	–	2
72	ಕಾರ್ಕಳ	–	1	–	1
73	ಚಿಕ್ಕಮಗಳೂರು	4	–	–	4
74	ತರಿಕೆರೆ	–	1	–	1
75	ಕಡೂರು	2	–	–	2
76	ತುರುವೇಕೆರೆ	4	2	–	6
77	ತುಮಕೂರು ನಗರ	1	–	–	1

78	ತುಮಕೂರು ಗ್ರಾಮಾಂತರ	1	1	–	2
79	ಕೊರಟಗೆರೆ	–	1	–	1
80	ಗುಬ್ಬಿ	–	1	–	1
81	ಶಿರಾ	1	–	–	1
82	ಪಾವಗಡ	–	–	–	0
83	ಚಿಕ್ಕಬಳ್ಳಾಪುರ	–	1	–	1
84	ಶಿಡ್ಲಘಟ್ಟ	2	–	1	3
85	ಚಿಂತಾಮಣಿ	1	–	–	1
86	ಮಾಲೂರು	2	–	–	2
87	ಯಲಹಂಕ	2	2	–	4
88	ಕೆ.ಆರ್.ಪುರ	1	–	1	2
89	ಬ್ಯಾಟರಾಯನಪುರ	–	1	–	1
90	ಯಶವಂತಪುರ	–	1	–	1
91	ದಾಸರಹಳ್ಳಿ	1	–	–	1
92	ಮಹಾಲಕ್ಷ್ಮೀ ಲೇಔಟ್	1	–	–	1
93	ಹೆಬ್ಬಾಳ	1	2	–	3
94	ಗೋವಿಂದರಾಜನಗರ	–	–	1	1
95	ಚಿಕ್ಕಪೇಟೆ	1	–	–	1
96	ಬಸವನಗುಡಿ	1	–	–	1
97	ಪದ್ಮನಾಭ ನಗರ	3	–	–	3
98	ಜಯನಗರ	1	–	–	1

99	ಮಹದೇವಪುರ	2	–	–	2
100	ಬೆಂಗಳೂರು ದಕ್ಷಿಣ	1	–	2	3
101	ಹೊಸಕೋಟೆ	1	–	–	1
102	ದೇವನಹಳ್ಳಿ	6	1	–	7
103	ದೊಡ್ಡಬಳ್ಳಾಪುರ	–	3	1	4
104	ನೆಲಮಂಗಲ	3	2	–	5
105	ಮಾಗಡಿ	4	1	–	5
106	ರಾಮನಗರ	–	1	–	1
107	ಕನಕಪುರ	2	–	–	2
108	ಮಳವಳ್ಳಿ	1	–	–	1
109	ಮದ್ದೂರು	8	–	2	10
110	ಮಂಡ್ಯ	3	–	–	3
111	ನಾಗಮಂಗಲ	1	–	–	1
112	ಕೃಷ್ಣರಾಜಪೇಟೆ	2	–	–	2
113	ಅರಸಿಕೆರೆ	2	2	1	5
114	ಬೇಲೂರು	2	1	1	4
115	ಹಾಸನ	3	1	–	4
116	ಅರಕಲಗೂಡು	1	–	–	1
117	ಸಕಲೇಶಪುರ	2	–	–	2
118	ಬೆಳ್ತಂಗಡಿ	2	–	–	2
119	ಮಡಿಕೇರಿ	3	–	–	3

120	ವಿರಾಜಪೇಟೆ	1	1	–	2
121	ಪಿರಿಯಾಪಟ್ಟಣ	2	–	1	3
122	ಕೆ.ಆರ್.ನಗರ	2	–	–	2
123	ಹುಣಸೂರು	1	–	3	4
124	ಹೆಚ್.ಡಿ.ಕೋಟೆ	3	–	–	3
125	ನಂಜನಗೂಡು	3	1	1	5
126	ಚಾಮುಂಡೇಶ್ವರಿ	2	1	–	3
127	ಕೃಷ್ಣರಾಜ	3	–	–	3
128	ಚಾಮರಾಜನಗರ	3	–	–	3
129	ಗುಂಡ್ಲುಪೇಟೆ	1	–	1	2
	ಒಟ್ಟು	**229**	**88**	**58**	**375**

* 2013–14ನೇ ಸಾಲಿನಲ್ಲಿ ವಿದೇಶ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ರದ್ದುಪಡಿಸಲಾಗಿದೆ.

ಅನುಬಂಧ–2

ರೈತರ ಅಧ್ಯಯನ ಪ್ರವಾಸದ ವರದಿ

2008–09ನೇ ಸಾಲಿನಿಂದ ರೈತರ ಅಧ್ಯಯನ ಪ್ರವಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿರುತ್ತದೆ. ಕರ್ನಾಟಕ ರಾಜ್ಯದ ರೈತರಿಗೆ ವಿದೇಶಗಳಲ್ಲಿ ನಡೆಯುತ್ತಿರುವ ಕೃಷಿ ಚಟುವಟಿಕೆ ಮತ್ತು ಕೃಷಿ ಆವಿಷ್ಕಾರಗಳನ್ನು ತಿಳಿಸುವುದು. ಕೃಷಿ ವಿಶ್ವ ಮಾರುಕಟ್ಟೆ ಹಾಗೂ ವ್ಯಾಪಾರ ನಿರ್ವಹಣೆ ಬಗ್ಗೆ ಮಾಹಿತಿ ನೀಡುವುದು, ಗ್ರಾಮೀಣ ಜೀವನದಲ್ಲಿ ಗುಂಪು ಸಹಭಾಗಿತ್ವ ಹಾಗೂ ಯಶೋಗಾಥೆಗಳ ಉದಾಹರಣೆಗಳನ್ನು ನಿದರ್ಶಿಸುವುದು ಹಾಗೂ ವಿಶ್ವದ ವಿವಿಧೆಡೆಯ ರೈತರಲ್ಲಿ ಸಂಪರ್ಕ ಜಾಲ ಬೆಳೆಸುವುದು ಈ ಯೋಜನೆಯ ಉದ್ದೇಶವಾಗಿರುತ್ತದೆ. ಕಳೆದ ಮೂರು ವರ್ಷಗಳಲ್ಲಿ ರಾಜ್ಯದ ವಿವಿಧ ಜಿಲ್ಲೆಗಳ

375 ರೈತರನ್ನು ಹಾಗೂ 27 ಅಧಿಕಾರಿಗಳನ್ನು ಚೀನಾ ಮತ್ತು ಇಸ್ರೇಲ್ ದೇಶಗಳ ವಿವಿಧ ಪ್ರದೇಶಗಳಲ್ಲಿ ಪ್ರವಾಸ ಏರ್ಪಡಿಸಿ ಕೃಷಿ ಆವಿಷ್ಕಾರಗಳ ಬಗ್ಗೆ ತಿಳುವಳಿಕೆ ಮೂಡಿಸಲಾಗಿರುತ್ತದೆ. ಸದರಿ ದೇಶಗಳ ವಿವಿಧ ಪ್ರದೇಶಗಳಲ್ಲಿ ಪ್ರವಾಸ ಏರ್ಪಡಿಸಿ ಕೃಷಿ ಚಟುವಟಿಕೆಗಳ ಬಗ್ಗೆ ರೈತರಿಗೆ ತಿಳಿವಳಿಕೆ ನೀಡಲಾಗಿರುತ್ತದೆ. 213–14ನೇ ಸಾಲಿನಲ್ಲಿ ವಿದೇಶ ಅಧ್ಯಯನ ಪ್ರವಾಸವನ್ನು ರದ್ದುಪಡಿಸಲಾಗಿದೆ. ಈ ಪ್ರವಾಸಕ್ಕೆ 2011–12ನೇ ಸಾಲಿನಿಂದ ಒಟ್ಟು ` 234.00 ಲಕ್ಷಗಳನ್ನು ವೆಚ್ಚ ಮಾಡಲಾಗಿರುತ್ತದೆ.

ಕ್ರ.ಸಂ.	ಸಾಲು	ವೆಚ್ಚ (ಲಕ್ಷ ರೂ.ಗಳಲ್ಲಿ)
1	2011–12	126.44
2	2012–13	107.65
3	2013–14	99.00
	ಒಟ್ಟು	**234.09**

ಭೇಟಿ ನೀಡಿರುವ ಸ್ಥಳಗಳ ವಿವರ ಈ ಕೆಳಕಂಡಂತಿದೆ.

ಚೀನಾ ದೇಶ:

ಬೀಜಿಂಗ್ :

1. ಲೂಮಿನಿಯಿಂಗ್ ಎಕಲಾಜಿಕಲ್ ಕ್ಷೇತ್ರಕ್ಕೆ ಭೇಟಿ. ಇದು ಚೈನಾ ದೇಶದ ಪ್ರಥಮ ನೈಸರ್ಗಿಕ ಕೃಷಿ ಕ್ಷೇತ್ರವಾಗಿದ್ದು, ಕೃಷಿ ಮತ್ತು ಕೃಷಿಯೇತರ ಚಟುವಟಿಕೆಗಳಲ್ಲಿ ನೈಸರ್ಗಿಕ ಸಂಪನ್ಮೂಲಗಳ ಬಳಕೆ ಕುರಿತ ಪ್ರಾತ್ಯಕ್ಷಿಕೆಗಳನ್ನು ವೀಕ್ಷಿಸಲಾಗಿರುತ್ತದೆ.

2. ಶುನ್ ಯಿ ಕೃಷಿ ಹೈಟೆಕ್ ವಲಯ: ಮಣ್ಣು ರಹಿತ ಕೃಷಿ, ಕುರಿ ಸಾಕಾಣಿಕೆ ತಾಂತ್ರಿಕತೆ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

3. ಚೈನಾ ಕೃಷಿ ವಿಶ್ವವಿದ್ಯಾಲಯ : ಕೃಷಿ ವಿಶ್ವವಿದ್ಯಾಲಯದ ಚಟುವಟಿಕೆಗಳ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

4. ಜಿಯಾವೊಟ್ಯಾಂಗ್ಸಾನ್ ಆಧುನಿಕ ಕೃಷಿ ಮತ್ತು ತಂತ್ರಜ್ಞಾನ ಪ್ರಾತ್ಯಕ್ಷಿಕೆ ಪಾರ್ಕ್ : ಸಸ್ಯ ಕ್ಷೇತ್ರ, ಯಾಂತ್ರೀಕರಣ, ಪುಷ್ಪಗಾರಿಕೆ, ಮೀನುಗಾರಿಕೆ, ಸಂಸ್ಕರಣೆ, ಕುರಿ ಸಾಕಾಣಿಕೆ, ಬೀಜೋತ್ಪಾದನೆ, ಜೈವಿಕ ತಂತ್ರಜ್ಞಾನ ಇತ್ಯಾದಿ ವಿಷಯಗಳ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

ಶಾಂಘೈ :

1. ನಗರ ತರಕಾರಿ ಕ್ಷೇತ್ರ ಸ್ಥಳ ಅಭಾವ ಇರುವ ಪ್ರದೇಶಗಳಲ್ಲಿ ತರಕಾತಿ ಬೆಳೆಯುವ ತಾಂತ್ರಿಕತೆ ಹಾಗೂ ಕೌಶಲ್ಯದ ಪ್ರಾತ್ಯಕ್ಷತೆಗಳನ್ನು ವೀಕ್ಷಿಸಲಾಗಿರುತ್ತದೆ.

2. ಲ್ಯಾಂಜ್ಗಿಯ ಭತ್ತ ಸಂಸ್ಕರಣಾ ಘಟಕ ಹಾಗೂ ಭತ್ತದ ತಾಕುಗಳಿಗೆ ಭೇಟಿ: ಭತ್ತ ಸಂಸ್ಕರಣಾ ತಾಂತ್ರಿಕತೆ ಮತ್ತು ಭತ್ತದ ನಾಟಿ ತಾಂತ್ರಿಕತೆ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

3. ಶೆನ್ಕಾವೋ ವಿಶೇಷ ಜಲಚರ ಉತ್ಪನ್ನಗಳ ಅನವೇಷಣಾ ಸಂಸ್ಥೆಗೆ ಭೇಟಿ: ಮೀನೂ ಮತ್ತು ಸೀಗಡಿ ಬೇಸಾಯದ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

4. ಶಾಂಘೈ ಬ್ರೈಟ್ ಕ್ಷೀರಾಗಾರ ಸಂಸ್ಥೆಗೆ ಭೇಟಿ: ಹೈನುಗಾರಿಕೆ ಹಾಗೂ ಹಾಲು ಸಂಸ್ಕರಣೆ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

5. ಸನ್ಮೀಯಾ ನವೀನ ಕೃಷಿ ಅಭಿವೃದ್ಧಿ ವಲಯ ಹಾಗೂ ಮಾದರಿ ಗ್ರಾಮಕ್ಕೆ ಭೇಟಿ: ಅಣಬೆ ಬೇಸಾಯ, ಜೈವಿಕ ತಂತ್ರಜ್ಞಾನ, ಹಸಿರು ಮನೆ ತಂತ್ರಜ್ಞಾನ, ಕೃಷಿ ಸಂಸ್ಕರಣೆ, ಕೃಷಿ ಉತ್ಪನ್ನಗಲ ಸಾಗರೋತ್ತರ ವಹಿವಾಟು ಕುರಿತು ಮಾಹಿತಿ ಪಡೆಯಲಾಗಿರುತ್ತದೆ.

2. ಇಸ್ರೇಲ್ ದೇಶ :

1. ಕೃಷಿ ಸಂಶೋಧನಾ ಸಂಸ್ಥೆ ಮತ್ತು ಬೆಟ್ ದಾಗನ್ ಪುಷ್ಪ ಕೃಷಿಯ ವೀಕ್ಷಣೆ.

2. ಫಲವತ್ತತೆ ವ್ಯಾಪಕ ನೀರಾವರಿ ಪದ್ಧತಿ, ಹವಾಮಾನ ನಿಯಂತ್ರಣ, ಹಸಿರು ಮನೆಯ ತಾಂತ್ರಿಕತೆಯ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

3. ಸಹಕಾರ ಗ್ರಾಮ – ಮೋಷನ್ ಲಾಚಿಶ್ ವೀಕ್ಷಣೆ : ದ್ರಾಕ್ಷಿ ಬೆಳೆ, ಭೂಮಿಫಲವತ್ತತೆಗೆ ಮಣ್ಣಿನ ನಿರ್ವಹಣೆ ಮತ್ತು ಸಸ್ಯ ಆರೋಗ್ಯ ಸಂರಕ್ಷಣೆ ಬಗ್ಗೆ ಮಾಹಿತಿ ಪಡೆಯಲಾಗಿದೆ.

4. ಜೂಡಿಯನ್ ಮರಭೂಮಿ ಪ್ರದೇಶ ಮತ್ತು ಮೃತ ಸಮುದ್ರ ವೀಕ್ಷಣೆ : ನೀರಾವರಿ ತಂತ್ರಜ್ಞಾನ ಮತ್ತು ತಾಳೆ ಕೃಷಿ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

5. ನಜರೆತ್‌ನ ಉತ್ತರ ಭಾಗದ ವೀಕ್ಷಣೆ : ಹೈನುಗಾರಿಕೆ ತಂತ್ರಜ್ಞಾನ ಮತ್ತು ಹಾಲು ಸಂಸ್ಕರಣಾ ತಂತ್ರಜ್ಞಾನ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

6. ಕಿಬ್ಬುಟ್ಜ್ ಗಿನ್ನೆಸರ್ – ಸಮುದಾಯಕ ಗ್ರಾಮ : ಬಾಳೆಯ ಅಂಗಾಂಶ ಕೃಷಿ ಪ್ರಯೋಗಾಲಯ ಹೈನುಗಾರಿಕೆ ಮತ್ತು ಕೃಷಿ ಹಾಗೂ ತೋಟಗಾರಿಕೆ ಬಗ್ಗೆ ಮಾಹಿತಿ ಪಡೆಯಲಾಗಿರುತ್ತದೆ.

ಈ ಪ್ರವಾಸದಿಂದ ರಾಜ್ಯದ ರೈತರು ವಿವಿಧ ಆಧುನಿಕ ಕೃಷಿ ತಾಂತ್ರಿಕತೆಗಳಾದ ನೀರಾವರಿ ತಾಂತ್ರಿಕತೆ ಮತ್ತು ಜಲ ಸಂರಕ್ಷಣೆ, ಹಸಿರು ಮನೆ ತರಕಾರಿ ಉತ್ಪಾದನೆ, ಸಮುದಾಯ ಬೇಸಾಯ ಹೈನುಗಾರಿಕೆ ಮತ್ತು ಇತರೆ ತಂತ್ರಜ್ಞಾನಗಳ ಬಗ್ಗೆ ಒಳನೋಟವನ್ನು ಪಡೆದಿದ್ದಾರೆ. ರಾಜ್ಯದ ರೈತರು ಸಮುದಾಯ ಬೇಸಾಯದ ಪ್ರಾಮುಖ್ಯತೆಯನ್ನು ಅರಿತಿದ್ದಾರೆ. ಉತ್ಪಾದನಾ ವೆಚ್ಚ, ಕೀಟ – ರೋಗ ಬಾಧೆ ಮತ್ತು ಮಾರುಕಟ್ಟೆ ಏರುಪೇರುಗಳನ್ನು ತಗ್ಗಿಸುವ

ಸಮುದಾಯ ಬೇಸಾಯದ ಪ್ರಾಮುಖ್ಯತೆಯನ್ನು, ವಿವಿಧ ಆಧುನಿಕ ಕೃಷಿ ತಾಂತ್ರಿಕತೆಗಳಾದ ನೀರಾವರಿ ತಾಂತ್ರಿಕತೆ ಮತ್ತು ಜಲ ಸಂರಕ್ಷಣೆ, ಹಸಿರು ಮನೆ ತರಕಾರಿ ಉತ್ಪಾದನೆ, ಸಮುದಾಯ ಬೇಸಾಯ, ಮತ್ತು ಕೃಷಿ ಯಂತ್ರೋಪ ಕರಣಗಳ ಬಳಕೆ ಬಗ್ಗೆ ಅರಿವು ಪಡೆದಿರುತ್ತಾರೆ.

ಬಡ್ಡಿದರ

1922(1095); ಶ್ರೀ ಲಕ್ಷಣ ಸಂಗಪ್ಪ ಸವದಿ (ಅಥಣಿ)

ಅ) 2013–14 ಮತ್ತು 2014–15 ನೇ ಸಾಲಿನಲ್ಲಿ ಸರ್ಕಾರವು ವಿವಿಧ ಹಂತಗಳಲ್ಲಿ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ನಿಗದಿಪಡಿಸಿರುವ ಬಡ್ಡಿ ದರ (Rate of Interest) ಎಷ್ಟು;

ಆ) ಒಂದು ವೇಳೆ ಈವರೆಗೆ ಬಡ್ಡಿ ದರ (Rate of Interest) ನಿಗದಿ ಪಡಿಸದಿದ್ದಲ್ಲಿ ಅದಕ್ಕೆ ಕಾರಣಗಳೇನು; ಬಡ್ಡಿ ದರ ನಿಗದಿಪಡಿಸುವಲ್ಲಿ ವಿಳಂಬವಾಗಿರುವುದರಿಂದ ಸಹಕಾರ ಸಂಘಗಳಿಗೆ ಮತ್ತು ರೈತರಿಗೆ ಅನಾನುಕೂಲವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಇ) 2013–14 ಮತ್ತು 2014–15 ನೇ ಸಾಲಿನ ಬಡ್ಡಿ ದರ (Rate of Interest) ನಿಗದಿಪಡಿಸಲು ಸರ್ಕಾರವು ಕಾಲಮಿತಿ ಹಾಕಿಕೊಂಡಿದೆಯೇ?

ಶ್ರೀ ಹೆಚ್.ಎಸ್.ಮಹದೇವ ಪ್ರಸಾದ (ಮಾನ್ಯ ಸಹಕಾರ ಹಾಗೂ ಸಕ್ಕರೆ ಸಚಿವರು)

ಅ) ಕೃಷಿ ಸಾಲಗಳ ಮೇಲಿನ ಬಡ್ಡಿ ರಿಯಾಯಿತಿ ಯೋಜನೆಯಡಿಯಲ್ಲಿ 2013–14 ನೇ ಸಾಲಿನಲ್ಲಿ ಸಹಕಾರ ಸಂಸ್ಥೆಗಳಿಂದ ರೈತರು ಪಡೆದಿರುವ `2.00 ಲಕ್ಷದವರೆಗಿನ ಬೆಳೆ ಸಾಲಗಳಿಗೆ ಶೂನ್ಯ ಬಡ್ಡಿ ದರ ಹಾಗೂ `2.00 ಲಕ್ಷದಿಂದ ರೂ.3.00 ಲಕ್ಷದವರೆಗಿನ ಬೆಳೆ ಸಾಲಗಳಿಗೆ ಶೇ. 100 ರ ಬಡ್ಡಿ ದರ ಅನ್ವಯವಾಗುತ್ತದೆ. ` 10.00 ಲಕ್ಷದವರೆಗಿನ ಮಧ್ಯಮಾವಧಿ ಹಾಗೂ ಧೀರ್ಘಾವಧಿ ಕೃಷಿ ಸಾಲಗಳಿಗೆ ಶೇ. 3.00 ಬಡ್ಡಿ ದರ ಅನ್ವಯವಾಗುತ್ತದೆ.